ಪತ್ರಿಕಾ ಪ್ರಕಟಣೆ
ಜನೇವರಿ 31, 2023

**ಹೆಚ್‌ಎಲ್‌ಎಲ್ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಂದ ಪ್ರತೀಕ್ಷಾ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುತ್ತದೆ**

ಬೆಳಗಾವಿ : ಹೆಚ್ ಎಲ್ ಎಲ್ ಲೈಫ್‌ಕೇರ್ ಲಿಮಿಟೆಡ್ ನ ಪ್ರತೀಕ್ಷಾ ಚಾರಿಟೇಬಲ್ ಸೊಸೈಟಿ 2022-23 ಶೈಕ್ಷಣಿಕ ವರ್ಷದಲ್ಲಿ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಪ್ರವೇಶ ಪಡೆಯಲು ಬಯಸುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಪ್ರತಿಕ್ಷಾ ಚಾರಿಟೇಬಲ್ ಸೊಸೈಟಿಯು BPL ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಹೆಚ್ ಎಲ್ ಎಲ್ ಸಂಸ್ಥೆಯ ಸಾಮಾಜಿಕ ಜವಾಬ್ದಾರಿ (CSR) ಕಾರ್ಯಕ್ರಮಗಳ ಒಂದು ಭಾಗವಾಗಿದೆ.

ಮುಖ್ಯವಾಗಿ ಈ ಯೋಜನೆಯು ಬೆಳಗಾವಿ ಜಿಲ್ಲೆಯ ಕರ್ನಾಟಕದ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿ ಅಧ್ಯಯನ ಮಾಡುವ ಇಂಜನೀರಿಂಗ್, ಮೆಡಿಸಿನ್, ಬಿ ಫಾರ್ಮಾ, ಡಿಪ್ಲೋಮಾ, ನರ್ಸಿಂಗ್ ಮತ್ತು ಐಟಿಐ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡುತ್ತದೆ.

ಆಯ್ದ ಐದು ಎಮ್‌ಬಿಬಿಎಸ್ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.30,000/-, ಇಂಜನೀಯರಿಂಗ್ ಮತ್ತು ಬಿ ಫಾರ್ಮಾ ವಿದ್ಯಾರ್ಥಿಗಳಿಗೆ ರೂ.20,000/- ಮತ್ತು ಡಿಪ್ಲೋಮಾ, ನರ್ಸಿಂಗ್ ವಿದ್ಯಾರ್ಥಿಗಳಿಗೆ ರೂ.10,000/- ನೀಡಲಾಗುತ್ತದೆ. ಮತ್ತು ಐಟಿಐ ವಿದ್ಯಾರ್ಥಿಗಳಿಗೆ ರೂ.5,000/- ನೀಡಲಾಗುವುದು. ಈ ಆರ್ಥಿಕ ನೆರವು ವಿದ್ಯಾರ್ಥಿಗಳ ಕೋರ್ಸ ಮುಗಿಯುವವರೆಗೂ ನೀಡಲಾಗುವುದು.

2014 ರಲ್ಲಿ ಆರಂಭವಾದ ಪ್ರತೀಕ್ಷಾ ಚಾರಿಟೇಬಲ್ ಸೊಸೈಟಿಯ ಕಾರ್ಯಕ್ರಮಗಳ ಅಡಿಯಲ್ಲಿ ಹೆಚ್‌ಎಲ್‌ಎಲ್, BPL ವರ್ಗಕ್ಕೆ ಸೇರಿದ ತಿರುವನಂತಪುರಂ, ಕೇರಳ ಮತ್ತು ಬೆಳಗಾವಿ ಜಿಲ್ಲೆ, ಕರ್ನಾಟಕದಲ್ಲಿ ವಿವಿಧ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಗಳನ್ನು ಪಡೆಯುತ್ತಿರುವ 237 ವಿದ್ಯಾರ್ಥಿಗಳಿಗೆ 98.25 ಲಕ್ಷ ಮೌಲ್ಯದ ಆರ್ಥಿಕ ನೆರವನ್ನು ನೀಡಿದೆ. ಹೆಚ್ ಎಲ್ ಎಲ್ ಉದ್ಯೋಗಿಗಳಿಂದ ಪ್ರಯೋಜಿತವಾದ ಪ್ರತೀಕ್ಷಾ ಚಾರಿಟೇಬಲ್ ಸೊಸೈಟಿಯು, ಪ್ರತೀಕ್ಷಾ ವೇದಿಕೆಯನ್ನು ಅನುಷ್ಠಾನಗೊಳಿಸಿದೆ. ಸೊಸೈಟಿಯ ನಿಧಿಯನ್ನು ನೌಕರರ ವೈಯಕ್ತಿಕ ಕೊಡುಗೆಗಳ ಮೂಲಕ ಮತ್ತು ಕಂಪನಿಯ CSR ನಿಧಿಯಿಂದ ಪಡೆಯಲಾಗುತ್ತದೆ.

ಹಿಂದಿನ ವರ್ಷಗಳಲ್ಲಿ ವಿದ್ಯಾರ್ಥಿವೇತನವನ್ನು ಪಡೆದ ವಿದ್ಯಾರ್ಥಿಗಳೊಂದಿಗೆ ಈ ವರ್ಷ 30ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುದಾನ ನೀಡಲಾಗುವುದು.

ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಆರ್ಥಿಕ ಹಿನ್ನೆಲೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಸಕ್ತಿದಾಯಕ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಮೂಲ ಆದಾಯದ ಪುರಾವೆಗಳನ್ನು, ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಲ್ಪಟ್ಟ ವ್ಯಾಸಂಗ ಪ್ರಮಾಣ ಪತ್ರಗಳನ್ನು ಮತ್ತು 10ನೇ ತರಗತಿ ಹಾಗೂ 12ನೇ ತರಗತಿಯ ಅಂಕಪಟ್ಟಿಗಳೊಂದಿಗೆ ಸಲ್ಲಿಸತಕ್ಕದ್ದು. ವಿದ್ಯಾರ್ಥಿವೇತನಕ್ಕಾಗಿ ಆಯ್ಕೆಯಾದ ಅಭ್ಯರ್ಥಿಗಳು, ಯೋಜನೆಯ ಲಾಭವನ್ನು ಪಡೆಯಲು ಪ್ರತಿ ವರ್ಷ ತಮ್ಮ ವಾರ್ಷಿಕ ಅಂಕಪಟ್ಟಿ ಅಥವಾ ಉತ್ತೀರ್ಣ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಅರ್ಜಿ ನಮೂನೆಗಳು ಹೆಚ್ ಎಲ್ ಎಲ್ ಲೈಫ್‌ಕೇರ್ ಲಿಮಿಟೆಡ್ ಕಛೇರಿಗಳಲ್ಲಿ ಪಡೆಯಬಹುದು ಅಥವಾ www.lifecarehll.com ನಿಂದ ಡೌನ್ಲೋಡ್ ಮಾಡಬಹುದು. ಅರ್ಜಿಗಳು "ಸೀನಿಯರ್ ಮ್ಯಾನೇಜರ್ (ಎಚ್‌ಆರ್)", ಹೆಚ್ ಎಲ್ ಎಲ್ ಲೈಫ್‌ಕೇರ್ ಲಿಮಿಟೆಡ್, ಕಣಗಲಾ ಫ್ಯಾಕ್ಟರಿ, ಹುಕ್ಕೇರಿ-ತಾಲೂಕಾ, ಬೆಳಗಾವಿ-ಜಿಲ್ಲಾ, ಕರ್ನಾಟಕ – 591225. ಇವರಿಗೆ 28 ಫೆಬ್ರುವರಿ 2023 ಅಥವಾ ಮುಂಚಿತವಾಗಿ ತಲುಪುವಂತೆ ಕಳುಹಿಸತಕ್ಕದ್ದು.